**Government of Karnataka**
**Deposition Sheet (R.P.N.57) Form 4 Criminal**

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ದೇವದುರ್ಗ

ಸಿ.ಸಿ. ನಂ. 33/2021

| | | |
|---|---|---|
| ಹೆಸರು | ಸಂತೋಷರಾಣಿ | ಪಿ. ಡಬ್ಲ್ಯೂ ಃ೫ |
| ಗಂಡನ ಹೆಸರು | ಮಲ್ಲಿಕಾರ್ಜುನ | ಸಿ. ಡಬ್ಲ್ಯೂ ಃ ೧ |
| ವಯಸ್ಸು | 40 ವರ್ಷ | |
| ಉದ್ಯೋಗ | ಕಚೇರಿ ಸಹಾಯಕರು ಆಡಳಿತಾಧಿಕಾರಿಗಳು ರಾಯಚೂರು ಮಹಾನಗರಪಾಲಿಕೆ ರಾಯಚೂರು | **ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ ಃ** |
| ವಾಸ | ರಾಯಚೂರು | 04-11-2025 |

**ಮುಖ್ಯ ವಿಚಾರಣೆಃ** ಮಾನ್ಯ ಸ.ಸ.ಅ. ರವರಿಂದಃ

ನಾನು ದಿನಾಂಕ: 14-08-2020 ರಿಂದ 31-08-2020 ರವರೆಗೆ ದೇವದುರ್ಗ ದಲ್ಲಿ ತಹಶೀಲ್ದಾರ ಎಂದು ದೇವದುರ್ಗ ಕರ್ತವ್ಯ ನಿರ್ವಹಿಸಿರುತ್ತೇನೆ.

ನಾನು ದಿನಾಂಕ: 24-08-2020 ರಂದು ತಹಶೀಲ್ದಾರ ದೇವದುರ್ಗ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ: 24-08-2020 ರಂದು ನಾನು ಮತ್ತು ಜೀಪ್ ಚಾಲಕ ಬಶೀರ ರವರು ಸಂಚರಿಸುತ್ತಿದ್ದಾಗ, ಸಂಜೆ 7-45 ಗಂಟೆಗೆ ಅಯ್ಯಪ್ಪ ದವಾಖಾನೆ ಎದುರುಗಡೆ ಹೋದಾಗ, ನಿರಂಜನ ಎನ್ನುವಾತ ಗಣೇಶ ಮೂರ್ತಿಯನ್ನು ಪ್ರಷ್ಠಾಪಿಸಿದ್ದಿ ಅಲ್ಲಿ ಸ್ಪೀಕರಗಳನ್ನು ಇಟ್ಟುಕೊಂಡಿದ್ದು, ಆ ಸಮಯದಲ್ಲಿ ಕೋವಿಡ್ -19 ನಿಯಮಾವಳಿಗಳು ಜಾರಿಯಲ್ಲಿದ್ದು, ದಿನಾಂಕ: 17-08-2020 ರಂದು ಮಾನ್ಯ ಕರ್ನಾಟಕ ಸರ್ಕಾರದ ಆದೇಶದಂತೆ ಕೋವಿಡ್ ನಿಯಮಾವಳಿಗಳನ್ನು ಪಾಲಿಸದೇ ಅದನ್ನು ಉಲ್ಲಂಘನೆ ಮಾಡಿದ್ದು, ನಾನು ಸ್ಪೀಕರಗಳನ್ನು ಹಾಕಬೇಡಿ ಜನರಿಗೆ ತೊಂದರೆಯಾಗುತ್ತದೆ ಎಂದು ಹೇಳಿದ್ದು ಮತ್ತು ಸಾಮಾಜಿಕ ಅಂತರ ಕಾಯಿದುಕೊಳ್ಳಲಿಲ್ಲ, ಥರ್ಮಲ್ ಸ್ಕ್ರಿನಿಂಗ್ ವ್ಯವಸ್ಥೆ ಇರಲಿಲ್ಲ, ಆಗ ಆರೋಪಿ ನಾವು ಹಿಂದೂ ಗಣೇಶವನ್ನು ಇಟ್ಟಿದ್ದು ಎಲ್ಲಾ ಕಡೆ ಹಾಕುತ್ತಾರೆ, ಮುಸ್ಲಿಂರ ಮೈಕನ್ನು ಬಂದ್ ಮಾಡಿಸಿ, ಮುಸ್ಲಿಂರ ಮೈಕ್

ನಿಮಗೆ ಕಾಣುವುದಿಲ್ವಾ ಎಂದು ನಾವು ಏಕೆ ಹಾಕಬಾರದೆಂದು ನನಗೆ ಹೇಳಿರುತ್ತಾನೆ. ಆಗ ಆಗ ಸೌಂ ಡ್ ಬಾಕ್ಸ್‌ಗಳನ್ನು ಜೀಪಿಗೆ ಹಾಕಿ ಎಂದು ಹೇಳಿರುತ್ತೇನೆ. ಆರೋಪಿತರು ನಾವೆ ತೆಗೆದುಕೊಂಡು ಹೋಗಿರುತ್ತೇವೆ ಎಂದು ಹೇಳಿ ಗಾಡಿಯನಲ್ಲಿ ಸ್ಪೀಕರಗಳನ್ನು ತೆಗೆದುಕೊಂಡು ಹೋಗಿರುತ್ತಾರೆ. ನಾನು ಪಿ ಎಸ್ ಐ ರವರಿಗೆ ಫೋನ್ ಮಾಡಿ ದೇವದುರ್ಗ ಅಯ್ಯಪ್ಪ ದವಖಾನೆ ಎದರುಗಡೆ ಗಣೇಶ ವಿಗ್ರಹ ಪ್ರತಿಷ್ಠಾಪಿಸಿ ಸ್ಪೀಕರ್ ಹಚ್ಚಿದ ಬಗ್ಗೆ ಹಾಗೂ ಅವುಗಳನ್ನು ಕಚೇರಿಗೆ ತೆಗೆದುಕೊಂಡು ಹೋಗಲು ತಿಳಿಸಿದ್ದರಿಂದ, ಆ ಸಮಯದಲ್ಲಿ ಪಿ ಎಸ್ ಐ ಮತ್ತು ಇಬ್ಬರು ಪೋಲಿಸರು ಸ್ಥಳಕ್ಕೆ ಬಂದಿರುತ್ತಾರೆ. ಸೌಂಡ್ ಬಾಕ್ಸ್‌ಗಳನ್ನು ಸ್ಥಳದಿಂದ ತೆಗೆದುಕೊಂಡು ಹೋಗಿರುತ್ತಾರೆ. ನಾನು ತಡೆಯಲು ಹೋದಾಗ, ಆರೋಪಿತರು ನನ್ನನ್ನು ತಳ್ಳಿ ಸ್ಪೀಕರಗಳನ್ನು ತೆಗೆದುಕೊಂಡು ಹೋಗಿರುತ್ತಾರೆ. ಆರೋಪಿ ತನ್ನ ಗೆಳೆಯರಿಗೆ ಫೋನ್ ಮಾಡಿ ಸ್ಥಳಕ್ಕೆ ಬರಲು ತಿಳಿಸಿರುತ್ತಾನೆ ಮತ್ತು ವಿಡಿಯೋ ಮಾಡಿ ಇವರೇನು ಪಿ ಎಸ್ ಐ ಇದ್ದೀರಾ ನಿಮಗೆ ದೇವದುರ್ಗ ಬರೆದುಕೊಟ್ಟಿದ್ದಾರೆಯೇ ನೀವು ಡಿ ಸಿ ಇದ್ದೀರಾ ಎಂದು ಹೇಳಿರುತ್ತಾನೆ. ಇಬ್ಬರು ಪಿ ಸಿ ಸ್ಥಳಕ್ಕೆ ಬಂದಿರುತ್ತಾರೆ. ನಾನು ಅವರಿಗೆ ಸ್ಪೀಕರಗಳನ್ನು ವಾಪಸ್ಸು ಕೊಡಬೇಕೆಂದು ಅವರಿಗೆ ಹೇಳಿರುತ್ತೇನೆ. ಆರೋಪಿತರ ಕೃತ್ಯದಿಂದ ನನ್ನ ಸರಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆ. ಮತ್ತು ಕೋವಿಡ್ ನಿಯಮಾವಳಿಗಳಾದ ಮುಖಕ್ಕೆ ಮಾಸ್ಕ ಧರಿಸದೇ ಇರುವುದು, ಸಾಮಾಜಿಕ ಅಂತರ ಕಾಯಿದು ಕೊಳ್ಳದೇ ಇರುವುದು, ಸ್ಯಾ ನಿಟೈಜರ್ ಮತ್ತು ಥರ್ಮಲ್ ಸ್ಕ್ರಿನಿಂಗ್ ವ್ಯವಸ್ಥೆ ಕಲ್ಪಿಸದೇ ಇರುವುದು ಕಂಡು ಬಂದಿರುತ್ತದೆ ಈ ಬಗ್ಗೆ ನಾನು ದೂರು ಕೊಟ್ಟಿರುತ್ತಾರೆ. ಸಾಕ್ಷಿದಾರರು ದೂರನ್ನು ನೋಡಿ ಗುರುತಿಸಿದ್ದು ನಿ ಪಿ 2 ಎಂದು, ಸಾಕ್ಷಿದಾರರ ಸಹಿಯನ್ನು ನಿ ಪಿ 2(ಎ) ಎಂದು ಗುರುತಿಸಲಾಯಿತು. ನಂತರ ಮರುದಿನ ದಿನಾಂಕ: 26-08-2020 ರಂದು ಬೆಳಿಗ್ಗೆ 10-45 ರಿಂದ 11-45 ವರೆಗೆ ನಾನು ತೋರಿಸಿದ ಸ್ಥಳದಲ್ಲಿ ಪಂಚನಾಮೆ ಮಾಡಿರುತ್ತಾರೆ. ಸಾಕ್ಷಿದಾರರು ಪಂಚನಾಮೆ ನೋಡಿ ಗುರುತಿಸಿದ್ದು ಪಂಚನಾಮೆಯನ್ನು ಈಗಾಗಲೇ ನಿ ಪಿ 1 ಎಂದು ಗುರುತಿಸಲಾಗಿದೆ. ಅದೇ ದಿನ ಪೋಲಿಸ್ ಠಾಣೆಯಲ್ಲಿ ನನ್ನ ಹೇಳಿಕೆ ಕೊಟ್ಟಿರುತ್ತೇನೆ. ನ್ಯಾ ಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಸಾಕ್ಷಿದಾರರು ಗುರುತಿಸಿರುತ್ತಾರೆ. ಮುದ್ದೆಮಾಲು ನೋಡಿದರೆ ಗುರುತಿಸುತ್ತೇನೆ.

**ವಾಟೀ ಸವಾಲು: ಆರೋಪಿತರ ಪರ ಶ್ರೀ ಪಿ ಟಿ ಎನ್ ವಕೀಲರಿಂದ:-**

1. ದಿನಾಂಕ: 24-08-2020 ರಂದು ನಾನು ಮತ್ತು ಜೀಪ್ ಚಾಲಕ ಬಶೀರ್ ದೇವದುರ್ಗ ಪಟ್ಟಣದ ರೌಂಡ್ಸ್ ಕರ್ತವ್ಯದಲ್ಲಿದ್ದೇವು ನಮ್ಮ ಇಬ್ಬರು ಹೊರತುಪಡಿಸಿ ಬೇರೆ ಯಾರು ಇರುವುದಿಲ್ಲ. ದೂರಿನಲ್ಲಿ ಜೀಪ್ ಚಾಲಕ ಬಶೀರ್ ರವರು ಇರುವ ಬಗ್ಗೆ ತಿಳಿಸಿರುತ್ತೇನೆ. ನಾನು ಸ್ಥಳಕ್ಕೆ ಹೋಗಿ ನೋಡಿದಾಗ, ಇಬ್ಬರು ಆರೋಪಿತರು ಮತ್ತು 04 ಜನ ಮಕ್ಕಳು ಅಲ್ಲಿ ಇದ್ದರು. ಆ 4 ಜನ ಮಕ್ಕಳು ಯಾರು ಎಂದು ನನಗೆ ಗೊತ್ತಿರುವುದಿಲ್ಲ ನಾನು ಹೋಗುವಷ್ಟರಲ್ಲಿ ಅವರು ಓಡಿ ಹೋಗಿರುತ್ತಾರೆ. ಘಟನಾ ಸ್ಥಳದ ಚಕ್ ಬಂದಿ ನನಗೆ ಹೇಳಲು ಆಗುವುದಿಲ್ಲ. ಘಟನೆಯು ರಾತ್ರಿ 7-45 ರಿಂದ ಸುಮಾರು 15 ನಿಮಿಷ ಆಗಿರುತ್ತದೆ. ನಾನು ದೂರವಾಣಿ ಕರೆ ಮಾಡಿದ ಮೇಲೆ ಅಲ್ಲಿ ಸಂತೋಷ. ಹೆಚ್. ಸಿ ಮತ್ತು ಪಿ ಎಸ್ ಐ ರಂಗಯ್ಯ ರವರು ಬಂದಿರುತ್ತಾರೆ. ದೂರಿನಲ್ಲಿ ಪಿ ಎಸ್ ಐ ರವರು ಸ್ಥಳಕ್ಕೆ ಬಂದಿದ್ದರು ಎಂದು ಹೇಳಿರುತ್ತೇನೆ. ನಾನು ದೂರವಾಣಿ ಕರೆ ಮಾಡಿದ ಪೋನ್ ಸ್ಮಾರ್ಟ್ ಪೋನ್ ಆಗಿರುತ್ತದೆ. ಸ್ಥಳದಲ್ಲಿ ಗಣೇಶ ವಿಗ್ರಹ ಇಟ್ಟಿರುವುದನ್ನು ಮತ್ತು ಜನರು ಸೇರಿರುವುದನ್ನು ಮೊಬೈಲ್ ನಿಂದ ವಿಡಿಯೋ ಮಾಡಿರುವುದಿಲ್ಲ.

2. ಘಟನೆಯಲ್ಲಿ 1ನೇ ಆರೋಪಿ ನನ್ನೊಂದಿಗೆ ವಾದ ಮಾಡಿ, ನೀವು ಪಿ ಎಸ್ ಐ ನಾ, ನೀವು ಡಿ ಸಿ ನಾ, ದೇವದುರ್ಗ ನಿಮಗೆ ಬರೆದುಕೊಟ್ಟಿದ್ದಾರೆಯೇ ಎಂದು ಹೇಳಿರುತ್ತಾನೆ. 1ನೇ ಆರೋಪಿ ಪೋನ್ ಮಾಡಿ ನಮ್ಮ ಜನರನ್ನು ಕರೆಸಿ ಎಂದು ಹೇಳಿರುತ್ತಾನೆ. ಕಾನ್ಸ್ಟೇಬಲ್ ಸಂತೋಷ ಬರುವ ಪೂರ್ವದಲ್ಲಿ ಘಟನೆ ನಡೆದಾಗ, ಸ್ಥಳದಲ್ಲಿ ನಾನು, ಬಶೀರ್ ಮತ್ತು ಇಬ್ಬರು ಆರೋಪಿತರು ಇದ್ದೇವು. ಆ ದಿನ ನೀವು ಎಷ್ಟು ಕಡೆ ಸ್ಪೀಕರ್‌ಗಳನ್ನು ತೆಗೆಸಿದ್ದೀರಾ ಎಂದರೆ ಸಾಕ್ಷಿಯು ಒಂದೇ ಕಡೆ ಸ್ಪೀಕರ್ ಇಟ್ಟಿದ್ದರು ಅದನ್ನು ತೆಗೆಸಿರುತ್ತೇನೆ ಎನ್ನುತ್ತಾರೆ. ದೂರಿನಲ್ಲಿ ಎಮ್ ಎ ಜಿ ಸಂಖ್ಯೆಯನ್ನು ನಮೂದು ಮಾಡಿ ಸಲ್ಲಿಸಿದ್ದೇನೆ. ಕ್ರಿಮಿನಲ್ ಪ್ರಕರಣಕ್ಕೆ ಸಂಬಂಧಪಟ್ಟಂತೆ ಎಮ್ ಎ ಜಿ ಪ್ರಕರಣಗಳು ನಮ್ಮ ತಹಶೀಲ್ದಾರ ಕಾರ್ಯಾಲಯದಲ್ಲಿ ನಡೆಯುತ್ತವೆ

ಎಂದರೆ ಸರಿ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತಹಶೀಲ್ದಾರ ಕಾರ್ಯಾಲಯದಲ್ಲಿ ಕ್ರಿಮಿನಲ್ ಪ್ರಕರಣ ನಡೆದಿರುವುದಿಲ್ಲ.

3. ದೂರು ಕೊಟ್ಟ ಮರುದಿನ ದಿನಾಂಕ: 26-08-2020 ರಂದು ಪಂಚನಾಮೆ ಮಾಡಿರುತ್ತಾರೆ. ಪಂಚನಾಮೆ ಮಾಡುವ ಕಾಲಕ್ಕೆ, ನಾನು, ಪಿ ಎಸ್ ಐ , ಚಾಸಾ-2 ಮತ್ತು 3 ರವರು ಇದ್ದೇವು. ಚಾಸಾ-2 ಮತ್ತು 3 ರವರು ನಿಮ್ಮ ಅಧೀನದಲ್ಲಿ ಕೆಲಸ ಮಾಡುತ್ತಾರೆಂದರೆ ಸರಿ. ಪಂಚನಾಮೆಯಲ್ಲಿ ಸ್ಥಳವನ್ನು ತೋರಿಸಿರುತ್ತೇನೆ. ಮತ್ತು ಘಟನೆಯ ವಿವರ ಹೇಳಿರುತ್ತೇನೆ. ಮತ್ತು ಪೋಲಿಸ್ ಠಾಣೆಗೆ ಹೋಗಿ ಹೇಲಿಕೆ ಕೊಟ್ಟಿರುತ್ತೇನೆ. ಪಂಚನಾಮೆ ಮಾಡುವ ಕಾಲಕ್ಕೆ ಸ್ಥಳದಲ್ಲಿ ಸ್ಪೀಕರ್ ಗಳು ಇರಲಿಲ್ಲ. ಸ್ಥಳದಲ್ಲಿ ಗಣೇಶನ ವಿಗ್ರಹ ಕೂರಿಸಿದ ಬಗ್ಗೆ ಛಾಯಾ ಚಿತ್ರವನ್ನು ತೆಗೆಸಿರುವುದಿಲ್ಲ. ನಾನು ಹೇಳಿದಂತೆ ಹೇಳಿಕೆಯನ್ನು ಪಂಚನಾಮೆಯಲ್ಲಿ ಬರೆದುಕೊಂಡಿರುತ್ತಾರೆ. ಪಂಚನಾಮೆ ಕಾಲಕ್ಕೆ ಯಾವುದೇ ವಸ್ತುವನ್ನು ವಶಪಡಿಸಿಕೊಂಡಿರುವುದಿಲ್ಲ.

4. ದಿನಾಂಕ: 24-08-2020 ರಾತ್ರಿ 7-45 ಗಂಟೆಗೆ ನೀವು ಮತ್ತು ಜೀಪ್ ಚಾಲಕ ಬಶೀರ್ ದೇವದುರ್ಗ ಪಟ್ಟಣದ ರೌಂಡ್ಸ್ ಗೆ ಹೋಗಿದ್ದೇವೆಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಸ್ಥಳಕ್ಕೆ ಹೋಗಿದ್ದಾಗ 1ನೇ ಆರೋಪಿ ಸ್ಪೀಕರಗಳನ್ನು ಹಚ್ಚಿ ಕೋವಿಡ್ ನಿಯಮಾವಳಿಗಳನ್ನು ಉಲ್ಲಂಘನೆ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮಗೆ ಆರೋಪಿತರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ಆರೋಪಿತರು ನಿಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ಆರೋಪಿತರು ಸಮಾಜಸೇವೆಯನ್ನು ಮಾಡುತ್ತಿದ್ದರು ಮತ್ತು ಕುಂದುಕೊರತೆಗಳ ಬಗ್ಗೆ ತಹಶೀಲ್ದಾರ ಕಾರ್ಯಾಲಯದಲ್ಲಿ ಅರ್ಜಿಗಳನ್ನು ಸಲ್ಲಿಸುತ್ತಿದ್ದರು ಎಂದರೆ ಸರಿಯಲ್ಲ. ಅಂಕಿ ಸಂಖ್ಯೆಗೋಸ್ಕರ ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೀರಿ ಎಂದರೆ ಸರಿಯಲ್ಲ. ಆ ದಿನ ಯಾವುದೇ ಘಟನೆಯಾಗಿಲ್ಲ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ;**

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ